ನಿಯಮ 7 ಸಿಂಧುತ್ವ ಪ್ರಮಾಣಪತ್ರ ನೀಡಿದೆ:

1) ನಿಯಮ 6ಎ ರ ಕೆಳಗೆ ಪಡೆಯಲಾಗಿರುವ ವರದಿಯನ್ನಾಧರಿಸಿ ಜಾತಿ ಆದಾಯ ಪರಿಶೀಲನಾ ಸಮಿತಿಯು ಉಭಯ ಪಕ್ಷದವರಿಗೆ ಕಾಲಾವಕಾಶ ನೀಡಿ ವಿಚಾರಣೆ ನಡೆಸುತ್ತದೆ.

2) ಸಮಿತಿಯು ಅರ್ಜಿದಾರನ ಶಾಲಾದಾಖಲೆಗಳು (ಜನ್ಮ ನೋಂದಣಿ ದಾಖಲೆಗಳು ಇದ್ದಲ್ಲಿ) ಮತ್ತು ಇತರೆ ಸಂಬಂಧಪಟ್ಟ ದಾಖಲೆಗಳನ್ನು ಸಹ ಪರಿಶೀಲಿಸಬಹುದು. ಮತ್ತು ಅಭ್ಯರ್ಥಿಯ ಜನಾಂಗದ ಬಗ್ಗೆ ಜ್ಞಾನವುಳ್ಳಂತಹ ಯಾವುದೇ ವ್ಯಕ್ತಿಯನ್ನು ಸಹ ವಿಚಾರಿಸಬಹುದು.

3) ಇಂತಹ ವಿಚಾರಣೆಯಿಂದ ಅಭ್ಯರ್ಥಿಯು ಕ್ಲೈಮ್ ನೈಜವೆಂದು(ಸತ್ಯವೆಂದು) ಕಂಡುಬಂದಲ್ಲಿ ನಮೂನೆ–1ಎ ರಂತೆ ಪ್ರಮಾಣ ಪತ್ರ ನೀಡಲಾಗುತ್ತದೆ. ಒಂದು ವೇಳೆ ಅಭ್ಯರ್ಥಿಯು ತನ್ನ ಜಾತಿ ಅಥವಾ ಜಾತಿ ಮತ್ತು ಆದಾಯದ ಬಗ್ಗೆ ತಪ್ಪು ಮಾಹಿತಿ ನೀಡಿ ಪ್ರಮಾಣ ಪತ್ರ ಪಡೆದಿದ್ದಲ್ಲಿ ಕಾರಣಗಳೊಂದಿಗೆ ಅರ್ಜಿಯನ್ನು ತಿರಸ್ಕರಿಸಿ ಆದೇಶ ಹೊರಡಿಸಿ, ಈ ನಿಯಮದ ಕೆಳಗೆ ಅರ್ಜಿಯನ್ನು ಪಡೆದು ಒಂದು ತಿಂಗಳೊಳಗೆ ಆದೇಶ ಹೊರಡಿಸಲಾಗುವುದು.

4) ಮೇಲ್ಕಂಡ ನಿಯಮಗಳ ಅಡಿ ಹೇಳಲಾಗಿರುವ ವಿಚಾರಣೆಯಲ್ಲಿ ಅರ್ಜಿದಾರನ ಕ್ಲೈಮು ಅನುಮಾನಾಸ್ಪದವಾಗಿದ್ದು, ಯಾವುದೇ ತೀರ್ಮಾನಕ್ಕೆ ಬರಲು ಸಾಧ್ಯವಾಗದಿದ್ದಲ್ಲಿ ಅಂತಹ ಪ್ರಕರಣವನ್ನು ನಾಗರೀಕ ಹಕ್ಕುಗಳ ಜಾರಿ ನಿರ್ದೇಶನಾಲಯಕ್ಕೆ ವಿವರವಾದ ತನಿಖೆ ಮಾಡಿ ವರದಿಸಲು ಕಳುಹಿಸಲಾಗುತ್ತದೆ. ಸದರಿ ನಿರ್ದೇಶನಾಲಯಕ್ಕೆ ಬಂದ ವರದಿಯನ್ನು ಆಧರಿಸಿ, ಸಮಿತಿಯು ಅರ್ಹತೆಯ ಮೇರೆಗೆ ಅವಶ್ಯವಿದ್ದಲ್ಲಿ ವಿಚಾರಣೆಯನ್ನು ಹಾಗೂ ಅರ್ಜಿದಾರನಿಗೆ ಹೇಳಿಕೆಯನ್ನು ನೀಡಲು ಅವಕಾಶ ನೀಡಿ ಪ್ರಕರಣವನ್ನು ಇತ್ಯರ್ಥಗೊಳಿಸಲಾಗುವುದು. ಈ ನಿಯಮದಡಿ ಆದೇಶವನ್ನು ಅರ್ಜಿ ಪಡೆದ ಒಂದು ತಿಂಗಳೊಳಗೆ ನೀಡಲಾಗುತ್ತದೆ.

5) ಜಾತಿ ಆದಾಯ ಪರಿಶೀಲನಾ ಸಮಿತಿಯ ಆದೇಶದಿಂದ ಬಾಧಿತನಾದ ವ್ಯಕ್ತಿಯು ವಿಭಾಗೀಯ ಅಧಿಕಾರಿಗಳಿಗೆ ಅಪೀಲು ಮಾಡಬಹುದು. ಸದರಿ ವಿಭಾಗೀಯ ಅಧಿಕಾರಿಗಳು ಉಭಯ ಪಕ್ಷದವರಿಗೂ ಅವಕಾಶ ನೀಡಿ ಸೂಕ್ತ ಆದೇಶವನ್ನು ಅಪೀಲು ಮಾಡಿದ 45 ದಿನಗಳ ಒಳಗಾಗಿ ಹೊರಡಿಸುತ್ತಾರೆ.

ನಿಯಮ 7ಎ ಸುಳ್ಳು ಜಾತಿ ಪತ್ರ ಜಾತಿ ಪತ್ರ ಪಡೆದಿದ್ದಕ್ಕೆ ದಂಡನೆ:

ಜಾತಿ ಮತ್ತು ಆದಾಯ ಸಮಿತಿ ಅಥವಾ ವಿಭಾಗಾಧಿಕಾರಿ, ಅಭ್ಯರ್ಥಿಯು ಸಿಂಧುತ್ವ ಪ್ರಮಾಣ ಪತ್ರಕ್ಕೆ ಸಲ್ಲಿಸಿದ ಕ್ಲೈಮನ್ನು ತಿರಸ್ಕರಿಸಿರುವ ಆದೇಶ ಅಥವಾ ತಿರಸ್ಕರಿಸಿರುವ ಅಪೀಲನ್ನು ನಾಗರೀಕ ಹಕ್ಕುಗಳ ಜಾರಿ ನಿರ್ದೇಶನಾಲಯಕ್ಕೆ ಕಳುಹಿಸಲಾಗುವುದು.

ಸುಳ್ಳು ಜಾತಿ ಪ್ರಮಾಣ ಪತ್ರವನ್ನು ಪಡೆದಂತಹ ಅರ್ಜಿದಾರರನ್ನು ಶಿಕ್ಷಿಸಲು ನಾಗರೀಕ ಹಕ್ಕುಗಳ ಜಾರಿ ನಿರ್ದೇಶನಾಲಯವು ಮುಂದಿನ ಕ್ರಮಗಳನ್ನು ವಹಿಸುತ್ತದೆ.

ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಸಹಾಯಧನ

3688(4349) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಣ್ಣ ಕೈಗಾರಿಕೆಗಳು ಸೇರಿದಂತೆ ರಾಜ್ಯದ ಎಲ್ಲಾ ಕೈಗಾರಿಕೆಗಳಿಗೆ ಸರ್ಕಾರ ಸಹಾಯಧನವನ್ನು ಬಿಡುಗಡೆ ಮಾಡಿದೆಯೇ:

ಆ) ಜಿಲ್ಲಾವಾರು, ಕೈಗಾರಿಕಾ ಘಟಕಗಳವಾರು ಬಿಡುಗಡೆಯಾದ ಮೊತ್ತದ ವಿವರ ನೀಡುವುದು;

ಇ) ಇದರ ಒಟ್ಟು ಮೊತ್ತವೆಷ್ಟು; ಈ ನಿಟ್ಟಿನಲ್ಲಿ ಕರಾವಳಿಯ ಸರ್ವತೋಮುಖ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಆರ್ಥಿಕ ವಲಯ ರೂಪಿಸಲು ಸರ್ಕಾರ ನಿರ್ಧರಿಸಿದೆಯೆ;

ಈ) ಇದರ ವ್ಯಾಪ್ತಿಯಲ್ಲಿ ಯಾವ ಯಾವ ಜಿಲ್ಲೆಗಳು ಬರುತ್ತವೆ; ವಿವರ ಒದಗಿಸುವುದು?

ಶ್ರೀ ಆರ್. ರೋಷನ್ ಬೇಗ್ (ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು) :

ಅ) 2002–03ರಲ್ಲಿ 308 ಘಟಕಗಳಿಗೆ ರೂ 5.00 ಕೋಟಿಗಳಷ್ಟು ಸಹಾಯಧನವನ್ನು ಈ ಘಟಕಗಳಿಗೆ ಬಿಡುಗಡೆ ಮಾಡಲಾಗಿದ್ದು, ದಿನಾಂಕ:31–3–03ರ ಅಂತ್ಯಕ್ಕೆ ರೂ. 405.67 ಕೋಟಿಗಳಷ್ಟು ಸಹಾಯಧನ 18279 ಘಟಕಗಳಿಗೆ ಬಿಡುಗಡೆಗಾಗಿ ಬಾಕಿ ಇದೆ.

ಆ) 2002–03ನೇ ಸಾಲಿನಲ್ಲಿ ಬಿಡುಗಡೆಯಾದ ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಇ) 2002–03ನೇ ಸಾಲಿಗೆ ಸಹಾಯಧನದ ಒಟ್ಟು ಮೊತ್ತ ರೂ. 5.00 ಕೋಟಿಗಳು. ಕರಾವಳಿಯ ಸರ್ವತೋಮುಖ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಆರ್ಥಿಕವಲಯ ರೂಪಿಸಲು ಕೆನರಾ ಚೇಂಬರ್ ಆಫ್ ಕಾಮರ್ಸ್, ಮಂಗಳೂರು ಇವರ ಮುಖಾಂತರ ಈ ಬಗ್ಗೆ ಕೋಸ್ಟಲ್ ವಿಶೇಷ ಆರ್ಥಿಕ ವಲಯ (ಸಿ ಎಸ್ ಇ ಜೆಡ್) ಸ್ಥಾಪಿಸಲು ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿದೆ.

ಈ) ಈ ಕೋಸ್ಟಲ್ ವಿಶೇಷ ಆರ್ಥಿಕ ವಲಯಗಳನ್ನು ಈ ಕೆಳಕಂಡಂತೆ 3 ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ದ.ಕ., ಉ.ಕ. ಹಾಗೂ ಉಡುಪಿ ಈ ಮೂರು ಜಿಲ್ಲೆಗಳನ್ನು ಒಳಪಡುತ್ತದೆ.

ಕ್ರಮ ಸಂಖ್ಯೆ	ಸ್ಥಳ (ಜಿಲ್ಲೆ)	ಅಂದಾಜು	ಅಂದಾಜು ಬೆಲೆ
1.	ಮಂಗಳೂರು (ದ.ಕ.)	1350 ಎಕರೆ	ರೂ. 710 ಕೋಟಿ
2.	ಪಡುಬಿದ್ರೆ (ಉಡುಪಿ)	2000 ಎಕರೆ	ರೂ. 940 "
3.	ಅಗಸೂರ್ (ಉ.ಕ)	1048 ಎಕರೆ	ರೂ. 470 "
	ಒಟ್ಟು	**4398 ಎಕರೆ**	**ರೂ. 2120** "

ಈ ಯೋಜನೆಯನ್ನು ಖಾಸಗಿ ಬಂಡವಾಳ ಹಂಚಿಕೆಯೊಂದಿಗೆ ಮಾಡಬೇಕಾಗಿದ್ದು ಇದಕ್ಕೆ ಸರ್ಕಾರದಿಂದ ಅಗತ್ಯ ಪ್ರೋತ್ಸಾಹ ನೀಡಬೇಕಾಗಿರುತ್ತದೆ.

District-wise details of State Investment subsidy pendency as on March 2002

Sl. No.	Name of the District	Manufacturing		Non-manufacturing		Total	
		No. of units	Amount Rs. in lakhs	No.of units	Amount Rs. in lakhs	No. of Units	Amount
1	2	3	4	5	6	7	8
1.	Bangalore (U)	1202	5631.96	147	721.42	1349	6353.38
2.	Bangalore (R)	1189	3730.86	561	1466.11	1750	5196.97
3.	Bagalkot	238	485.64	163	230.23	401	715.87
4.	Belgaum	980	1424.84	468	530.43	1448	1955.27
5.	Bellary	272	516.02	330	1041.26	602	1557.28

1	2	3	4	5	6	7	8
6.	Bidar	479	369.73	75	151.52	554	521.25
7.	Bijapur	342	615.31	161	163.80	503	779.11
8.	Chamarajnagar	120	120.32	103	146.61	223	266.93
9.	Chitradurga	209	415.59	202	390.46	411	806.05
10.	Chickmagalur	113	148.11	168	279.42	281	427.53
11.	Davanagere	284	655.75	18	22.49	302	678.24
12.	Dharwad	470	1084.99	234	433.15	704	1518.14
13.	Dakshina Kannada	819	1750.18	55	37.05	874	1787.23
14.	Gadag	245	269.36	75	64.23	320	333.59
15.	Gulbarga	173	386.52	256	642.02	429	1028.54
16.	Hassan	236	470.62	340	373.95	576	844.57
17.	Haveri	119	136.48	118	149.52	237	286.00
18.	Karwar	900	1522.65	254	286.62	1154	1809.27
19.	Kodagu	61	79.08	89	298.95	150	378.03
20.	Kolar	1042	2260.80	583	1401.26	1625	3662.03
21.	Koppal	162	470.15	73	515.20	235	985.35
22.	Mandya	253	383.01	148	193.80	401	576.81
23.	Mysore	844	2319.00	69	133.00	913	2452.00
24.	Raichur	66	143.98	176	472.63	242	616.61
25.	Shimoga	320	542.16	101	153.75	421	695.91
26.	Tumkur	798	1869.32	471	792.3	1269	2681.62
27.	Udupi	860	1581.49	45	72.26	905	1653.75
	Total	**12796**	**29383.92**	**5483**	**11163.44**	**18279**	**40567.36**

ಕರಾವಳಿ ಸಮುದ್ರದ ಮೀನುಗಾರಿಕೆ

3689(4350) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಮೀನುಗಾರಿಕೆ ಹಾಗು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರಾವಳಿ ಸಮುದ್ರದ ಆಳವಾದ ಸ್ಥಳಗಳಲ್ಲಿ ಮೀನುಗಾರಿಕೆ ಮಾಡುವವರಿಗೆ ವಿದ್ಯುತ್ ಯಂತ್ರದ ಸಹಾಯದ ಮೂಲಕ ಮೀನುಗಾರಿಕೆ ಮಾಡುವ ಮೀನುಗಾರರಿಗೆ ನಿಷೇಧ ಹೇರಲಾಗಿದೆಯೇ;

ಆ) ಈ ನಿಷೇಧದಿಂದ ಇದೇ ವೃತ್ತಿಯನ್ನು ಮಾಡುವ ಕುಟುಂಬಗಳಿಗೆ ಜೀವನೋಪಾಯಕ್ಕೆ ಅಡ್ಡಿಪಡಿಸಿದಂತಾಗುವುದಿಲ್ಲವೆ;

ಇ) ಇಂಗಹ ತೀರ್ಮಾನ ಕೈಗೊಳ್ಳಲು ಕಾರಣಗಳೇನು; ಯಾವ ಯಾವ ಮೀನುಗಾರಿಕಾ ಬಂದರುಗಳಲ್ಲಿ ಇಂತಹ ನಿಷೇಧ ಮಾಡಲಾಗಿದೆ;

ಈ) ರಾಜ್ಯದ ಒಟ್ಟು ಕರಾವಳಿ ಪ್ರದೇಶ ವ್ಯಾಪ್ತಿಗಳಲ್ಲೆ ಬರುವ ಮೀನುಗಾರಿಕಾ ಬಂದರುಗಳು ಯಾವುವು;